# ದೇವರ ಕೋಣೆಗೆ ವಿಶಿಷ್ಟ ಪೊರಕೆ

ದೇವರಿಗೆಂದೇ ಪ್ರತ್ಯೇಕ ಕೋಣೆ ಇರುತ್ತದೆ. ಅಲ್ಲಿಗೆ ಬೇರೆ ಕಡೆ ಕಸ ಹೊಡೆಯುವ ಪೊರಕೆ ಕೊಂಡೊಯ್ಯುವಂತಿಲ್ಲ. ಹಾಗಾಗಿ ದೇವರ ಕೋಣೆಯನ್ನು ಶುಚಿಗೊಳಿಸಲೆಂದೇ ಬೇರೆ ತರಹದ ಪೊರಕೆ ತಯಾರಿಸುವ ಪರಿಪಾಠ ಹಲವೆಡೆ ಇದೆ. ಹಿತ್ತಂಡೆ ಹುಲ್ಲು ಅಥವಾ ಇನ್ನಿತರ ಹುಲ್ಲಿನಿಂದ ಈ ಪೊರಕೆಯನ್ನು ತಯಾರಿಸಲಾಗುತ್ತದೆ.

**-ಎಸ್.ಎನ್.ಮಹಾಬಲ ರಾವ್,**
**ನರಸಿಂಹರಾಜಪುರ**



# ಸಂಜೀವಿನಿ ಹನುಮಂತ



ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ಕ್ಷೇತ್ರ ಹೊಸನಾಡು ಕೊಡ್ಯಡ್ಕ ಅನ್ನಪೂರ್ಣೇಶ್ವರಿಯ ಭವ್ಯ ದೇಗುಲ ಯಾತ್ರಿಕರನ್ನು ಸೆಳೆಯುತ್ತಿದೆ. ದೇಗುಲದ ಉದ್ಯಾನವನದಲ್ಲಿ ಸ್ಥಾಪಿಸಲಾಗಿರುವ ಕೃಷ್ಣ, ರಾಧೆ, ಅಷ್ಟ ಭುಜಾವತಾರಿ ಶ್ರೀ ಶಕ್ತಿ ದುರ್ಗೆ ಮುಂತಾದ ಪ್ರತಿಮೆಗಳು ಕಣ್ಮನ ಸೆಳೆಯುತ್ತವೆ. ಎಲ್ಲಕ್ಕೂ ಮುಕುಟವಿಟ್ಟಂತೆ ಸುಮಾರು 71 ಅಡಿ ಬೃಹದಾಕಾರದ ಆಂಜನೇಯಸ್ವಾಮಿಯ ವಿಗ್ರಹವು ಬಲಗೈಯಲ್ಲಿ ಗದಾಧಾರಿಯಾಗಿ, ಎಡಗೈಯಲ್ಲಿ ಸಂಜೀವಿನಿ ಪರ್ವತ ಹೊತ್ತಂತೆ ನಿರ್ಮಿತವಾಗಿದೆ. ಬೃಹತ್ ಗಾತ್ರದ ರುದ್ರ ಗಾಂಭೀರ್ಯದ ಹನುಮನ ವಿಗ್ರಹವು ಕಲಾವಿದನ ಉತ್ಕೃಷ್ಟ ಪ್ರತಿಭೆಗೆ ಸಾಕ್ಷಿಯೆನಿಸಿದೆ.

**-ಕೆ.ರಾಮಕೃಷ್ಣ, ತೀರ್ಥಹಳ್ಳಿ**

# ಸೆಗಣಿಯ ಗೊಂಬೆ

ಬಾದಾಮಿ ಶ್ರೀ ಬನಶಂಕರಿ ದೇವಿ ಜಾತ್ರೆಯಲ್ಲಿ ಕಾಣಸಿಗುವ ಸೆಗಣಿಯ ಗೊಂಬೆಗಳು ಕಲಾವಿದರ ಕಲಾ ನೈಪುಣ್ಯಕ್ಕೆ ನಿದರ್ಶನಗಳಾಗಿವೆ. ಈ ಗೊಂಬೆಗಳನ್ನು ಹಳ್ಳಿಗಳಲ್ಲಿ ಲಭ್ಯವಿರುವ ದನಗಳ ಸೆಗಣಿಯಿಂದ ಮತ್ತು ಹುಲ್ಲು ಕಡ್ಡಿಗಳಿಂದ ತಯಾರಿಸುತ್ತಾರೆ. ಅವುಗಳನ್ನು ಒಣಗಿಸಿ ಮೇಲೆ ನೈಸರ್ಗಿಕ ಬಣ್ಣಗಳಿಂದ ಶೃಂಗರಿಸುತ್ತಾರೆ. ಜಾತ್ರೆಗೆ ಬಂದ ಜನ ದೇವಿಯ ಪ್ರಸಾದದ ಜೊತೆ ಇವುಗಳನ್ನು ಕೊಂಡುಕೊಳ್ಳುತ್ತಾರೆ. ಊರಿಗೆ ಹೋಗಿ ನೆರೆಹೊರೆಯವರಿಗೆ ಪ್ರಸಾದದ ಜೊತೆ ಈ ಗೊಂಬೆಗಳನ್ನು ಹಂಚುತ್ತಾರೆ. ಈ ಗೊಂಬೆಗಳು ಸೇರುವ ಮನೆಯಲ್ಲಿ ಮಂಗಳ ಕಾರ್ಯಗಳು ನೆರವೇರುತ್ತವೆ ಎಂಬುದು ಜನರ ನಂಬಿಕೆಯಾಗಿದೆ. ಗೊಂಬೆಗಳ ಮಾರಾಟದಿಂದ ತಮ್ಮ ನಿತ್ಯ ಬದುಕಿನ ಬಂಡಿಯನ್ನು ಸ್ವಲ್ಪವಾದರೂ ಮುಂದೆ ಸಾಗಿಸಬಹುದೆಂಬ ಭರವಸೆ ಈ ಕಲಾವಿದರಲ್ಲಿ ಇದೆ.

**-ಕೆ.ಪಿ.ರಾಮಗುಂಡಿ, ಬೈಲಹೊಂಗಲ**

